(c) Yes. The details of the tanks which are not useful for irrigation are as under.

(d) (1) **Hire Mahakoota Tank.**—There is insufficient area for accommulation of water for this tank. So far of the time being there is no proposal for development of this tank.

(2) **Mallapoora Tank.**—This is a oozing tank. There are no channels. Therefore direct irrigation is not possible from this tank.

(3) **Halikeri Tank.**—Since water is oozing from the bottom of the tankbund small scale irrigation is feasible. For development of this tank, a project at an estimated cost of Rs. 99,900 has been prepared and the work will be taken up for execution.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ನೀರಾವರಿ ಉಪಯೋಗಕ್ಕೆ ಬರದೆ ಇರತಕ್ಕಂಥ ಕೆಲವು ಕೆರೆಗಳು ಇವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ತಾವು ೩ ಕೆರೆಗಳು ಇವೆ ಎಂದು ಹೇಳಿದ್ದೀರಿ. ಅದರಲ್ಲಿ ಹಳಿಕೇರಿ ಕೆರೆ ಬಹಳ ಪ್ರಾಮುಖ್ಯವಾದ ಕೆರೆ. ಈ ಕೆರೆ ಸುಧಾರಣೆ ಕೆಲಸ ತೆಗೆದುಕೊಳ್ಳಲು ರೂ. ೯೯,೯೦೦ ಅಂದಾಜು ವೆಚ್ಚದ ಪತ್ರಗಳನ್ನು ತಯಾರಿಸಲಾಗಿದೆಯೆಂದು ಹೇಳಿದ್ದೀರಿ. ಈ ಕೆರೆ ಅತೀ ಹಿಂದುಳಿದ ಜನರಿಗೆ ಬಹಳ ಉಪಯೋಗವಾಗತಕ್ಕ ಕೆರೆಯಾದ್ದರಿಂದ ಈ ಕೆರೆಯ ರಿಪೇರಿಯನ್ನು ಈ ವರ್ಷವೇ ಅತಿ ಶೀಘ್ರವಾಗಿ ಮಾಡಿಸಿಕೊಡುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಸೆಕ್ಷನ್ ೩೦೬ರ ಕೆಳಗೆ ೧೯೫೩ನೇ ಫೆಬ್ರುವರಿ ಒಳಗೆ ಈ ಕೆರೆಯ ಕೆಲಸವನ್ನು ಮುಗಿಸಬೇಕೆಂದು ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಬೇಲಿಕೆಂಡಿ ಕೆರೆ ೧೯೭೧-೭೨ರಲ್ಲಿ ೭೯೧ ಎಕರೆ ಪ್ರದೇಶಕ್ಕೆ ನೀರುಣಿಸುತ್ತಿದ್ದು ೧೯೭೯-೮೦ರಲ್ಲಿ ಕೇವಲ ೧೪೧ ಎಕರೆಗೆ ನೀರು ಒದಗಿಸುತ್ತಿದೆ. ಇದಕ್ಕೆ ಕಾರಣ ಕೆರೆಯಲ್ಲಿ ಹೂಳು ಬಿದ್ದು ವಿಸ್ತೀರ್ಣ ಚಿಕ್ಕದಾಗಿದೆ, ಈ ಕೆರೆಯ ಹೂಳನ್ನೂ ತೆಗೆಸತಕ್ಕದ್ದು ಅವಶ್ಯವಿರುವುದರಿಂದ ಈ ಕಾರ್ಯವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಮುಂದಿನ ವರ್ಷ ಅದನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ —ಈ ವರ್ಷವೇ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಅದನ್ನು ಪರಿಶೀಲಿಸಲಾಗುವುದು.

Land Tribunal meetings boycotted in Haliyal N.K. District

485. SRI V.M. GHADI (Haliyal).—Will the Minister for Revenue and Agriculture be pleased to state:

(a) whether it is not a fact that the members of the Haliyal (North Kanara District) Land Tribunal have boycotted the Tribunal meetings ;

(a) if so, the reasons for the same ;

(c) it is not a fact that local MLA has represented this case to the Government demanding that the Chairman of the said Land Tribunal is to be changed and enquiry to be made ;

(d) if so, whether the Chairman has been changed and enquiry has been completed ;

(e) whether the Government will please place the enquiry report on the table of the House ?

SRI S. BANGARAPPA (Minister for Revenue and Agriculture)—

(a) No.

(b) Does not arise in view of reply to clause (a) above.

(c) Government have received a representation from the local MLA on these lines.

(d) An enquiry is contemplated.

(e) Will be considered in due course.

ಶ್ರೀ ವಿ.ಎಂ. ಘಾಡಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರ ನೋಡಿ ನನಗೆ ಆಶ್ಚರ್ಯ ಮತ್ತು ನಗು ಎರಡೂ ಬರುತ್ತಿದೆ. ಹಲಿಯಾಳ ಭೂ ನ್ಯಾಯ ಮಂಡಲಿ ಸದಸ್ಯರು (ಉತ್ತರ ಕನ್ನಡ ಜಿಲ್ಲೆ) ನ್ಯಾಯ ಮಂಡಲಿ ಸಭೆಗೆ ಹಾಜರಾಗುವುದನ್ನು ಬಹಿಷ್ಕರಿಸಿರುವುದು ನಿಜವೇ ಎಂದು ಕೇಳಿದ ಉತ್ತರಕ್ಕೆ 'ಇಲ್ಲ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಆ ಟ್ರಿಬ್ಯುನಲ್ ಸದಸ್ಯನಿದ್ದು ಅಲ್ಲಿಯ ಅನ್ಯಾಯಗಳನ್ನು ನೋಡಿ ಸಹಿಸಲಾಗದೇ ನ್ಯಾಯ ಮಂಡಲಿಯ ಸಭೆಗೆ ಹಾಜರಾಗುವುದನ್ನು ಬಹಿಷ್ಕರಿಸಿದ್ದೇನೆ. ಅಲ್ಲಿಯ ಸಭೆಗೆ ಹೋಗಲು ಮನಸ್ಸು ಬಾರದೇ ಹೋಗದಿರುವುದು ನಿಜ. ಅಲ್ಲಿ ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

†ಶ್ರೀ ಎಸ್. ಬಂಗಾರಪ್ಪ.–ಮಾನ್ಯ ಅಧ್ಯಕ್ಷರೆ, ಅವರು ಕೇಳಿರತಕ್ಕ ಪ್ರಶ್ನೆಗೆ ಉತ್ತರ ಸರಿಯಾಗಿಯೇ ಕೊಡಲಾಗಿದೆ. ಭೂ ನ್ಯಾಯ ಮಂಡಲಿ ಸದಸ್ಯರು ಹಾಜರಾಗುವುದನ್ನು ಬಹಿಷ್ಕರಿಸಿರುವುದು ನಿಜವಲ್ಲವೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರವನ್ನು ಕೊಟ್ಟಿದ್ದೇವೆ. ಒಂದು ವೇಳೆ ಸದಸ್ಯರು ಬಹಿಷ್ಕರಿಸಿದ್ದರೆ ಅದು ರೆಕಾರ್ಡ್ ಆಗಿ ಪ್ರೊಸೀಡಿಂಗ್ಸ್‌ನಲ್ಲಿ ಬರುತ್ತಾ ಇತ್ತು. ಯಾರೂ ಸದಸ್ಯರು ಹೋಗದಿದ್ದ ಪಕ್ಷದಲ್ಲಿ ಸಭೆ ಅಡ್ಜರ್ನ್ ಆಗುತ್ತಿತ್ತು. ಹಾಗೆ ಆಗಿಲ್ಲದಿದ್ದರಿಂದ ಇದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ವಿ.ಎಂ. ಘಾಡಿ.–ಭೂ ನ್ಯಾಯ ಮಂಡಲಿ ಸದಸ್ಯರುಗಳು ನ್ಯಾಯ ಮಂಡಲಿಯ ಸಭೆಗೆ ಹಾಜರಾಗುವುದನ್ನು ಬಹಿಷ್ಕರಿಸಿರುವುದರಿಂದ ಈ ಬಗ್ಗೆ ಸರ್ಕಾರ ವಿಚಾರಣೆ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ಈ ಪ್ರಶ್ನೆಯನ್ನು ತಡೆಹಿಡಿದು ವಿಚಾರಣೆ ನಡೆಸಿ ಆನಂತರ ಈ ಪ್ರಶ್ನೆಯನ್ನು ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಪ್ರಶ್ನೆಯನ್ನು ತಡೆಹಿಡಿಯುವ ಪ್ರಶ್ನೆ ಬರುವುದಿಲ್ಲ. ಮಾನ್ಯ ಸದಸ್ಯರು ಸಭೆಗೆ ಹೋಗದಿದ್ದರೆ ಅದು ಬಹಿಷ್ಕರಿಸಿದಂತಾಗುವುದಿಲ್ಲ. ಎಲ್ಲಾ ಸದಸ್ಯರು ಒಟ್ಟಿಗೆ ಸಭೆಗೆ ಹೋಗದೇ ಕೋರಂ ಇಲ್ಲದ ಪಕ್ಷದಲ್ಲಿ ಇದೆಲ್ಲಾ ಉದ್ಭವವಾಗುತ್ತದೆ. ಕೋರಂ ಬಂದರೆ ಸಭೆ ನಡೆದು ಬಿಡುತ್ತದೆ. ಎಲ್ಲಾ ಸದಸ್ಯರೂ ಸಭೆಯನ್ನು ಬಹಿಷ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರಾದ ಶ್ರೀ ವಿ.ಎಂ. ಘಾಡಿಯವರು ಕೊಟ್ಟ ರತಕ್ಕ ಆಪಾದನೆಗಳ ಪಟ್ಟಿ ಸರ್ಕಾರಕ್ಕೆ ಬಂದಿದ್ದು ಆ ಬಗ್ಗೆ ವಿಚಾರಣೆ ಮಾಡಲಾಗುತ್ತಿದೆ.

ಶ್ರೀ ವಿ ಎಂ. ಘಾಡಿ.—ಅಧ್ಯಕ್ಷರೆ, ನಾವು ನಾಲ್ಕು ಮಂದಿ ಸದಸ್ಯರು ಸಭೆಯನ್ನು ಬಹಿಷ್ಕರಿಸಿದ್ದೇವೆ. ಆ ಕಾರಣದಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳುತಿ ದ್ದೇನೆ. ದಯಮಾಡಿ ಫೈಲ್ ತರಿಸಿ ನೋಡಿದರೆ ಆಗ ಎಲ್ಲಾ ಸಂಗತಿ ಹೊರಬೀಳುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಪ್ರಶ್ನೆಯನ್ನು ತಡೆಹಿಡಿಯುವುದು ಅನಾವಶ್ಯಕವೆಂದು ನಾನು ಹೇಳುತ್ತೇನೆ. ಈ ಬಗ್ಗೆ ಎಲ್ಲಾ ಟ್ರಿಬ್ಯುನಲ್ ಸದಸ್ಯರೂ ಸೇರಿ ರುಜು ಮಾಡಿಕೊಟ್ಟರೆ ನಾನು ಅದನ್ನು ವಿಚಾರಣೆ ಮಾಡುತ್ತೇನೆ.

ಶ್ರೀ ವಿ.ಎಂ ಘಾಡಿ —ಈ ಬಗ್ಗೆ ಫೈಲ್ ತರಿಸಿ ನೋಡುವುದರಿಂದ ಎಲ್ಲಾ ಗೊತ್ತಾಗುತ್ತದೆ. ಆದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಪ್ರಶ್ನೆಯನ್ನು ತಡೆಹಿಡಿಯುವ ಪ್ರಶ್ನೆ ಬರುವುದಿಲ್ಲ. ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. ಸ್ಥಳೀಯ ಎಂ.ಎಲ್.ಎ. ಯವರು ಸರ್ಕಾರದವರಿಗೆ ಈ ಪ್ರಕರಣದ ವಿಷಯದಲ್ಲಿ ಮನವಿ ಮಾಡಿಕೊಂಡಿರುವುದು ನಿಜ. ಅದನ್ನು ಸ್ಪಷ್ಟೀಕರಿಸಿ ಕೊಳ್ಳಲಾಗಿದೆಯೆಂದು ಉತ್ತರ ಕೊಟ್ಟಿದ್ದೇವೆ. ಈ ಬಗ್ಗೆ ಸರ್ಕಾರ ಮುಚ್ಚುಮರೆ ಮಾಡುವುದಿಲ್ಲ. ಮಾನ್ಯ ಸದಸ್ಯರಾದ ಘಾಡಿಯವರು ಕೊಟ್ಟಿರತಕ್ಕದ್ದರ ಬಗ್ಗೆ ವಿಚಾರಣೆ ಮಾಡಲಾಗುತ್ತಿದೆ.

SRI B.B. SAYANAK.—Sir, to question (c) 'whether it is not a fact that the local MLA has represented this case to the Government', the answer given by the Minister is, 'Government have received a representation from the local MLA on these lines' which means the Members have boycotted the tribunal. But, to the question No. (a) the Hon'ble Minister has said 'no'. Therefore, the answer is not correct and I request the Speaker to withhold the question.

SRI S. BANGARAPPA.—I see no grounds to withhold the question since the question pertains to the representation alleged to have been made or submitted to the Government by the concerned MLA Sri V.M. Gadi. I have stated that Sri Gadi has no doubt given a representation to Government, but I have not accepted that the Members of the tribunal have signed that representation sent by Sri Gadi. Therefore, I see no reason to withhold this question.

Allotment of Land to M/s Padma Tourist Centre at Dharwar.

517 SRI G K. TAKKED (Parasagad).—Will the Minister for Revenue and Agriculture be pleased to state,

(*a*) whether it is a fact that a portion of land in Government site No. 113/- (A)/A 1/D at Dharwar was recommended by the Director of Tourism for reservation and allotment to M/s Padma Tourist Centre, Dharwar;

(*b*) whether Government is aware that this recommendation was made in pursuance of the Government policy and to promote tourism in the State and to give scope to private enterprises;

(*c*) whether it has come to the notice of Government that some vested interests are coming in the way of granting this land to M/s Padma Tourist Centre;

(*d*) whether Government have taken over that land under Tourist Development Scheme;

(*e*) whether Government is aware that M/s Padma Tourist Centre are one of those who have lost lands, houses and property in